**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ-೫೮೩ ೨೭೬**

## ಜನವರಿ ೦೭, ೨೦೧೯ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿಯ ೯೮ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಎ. ಸುಬ್ಬಣ್ಣ ರೈ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೩. ಡಾ. ಸ.ಚಿ.ರಮೇಶ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೦೭. ಡಾ. ಮಂಜುನಾಥ ಬೇವಿನಕಟ್ಟಿ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದಿನಾಂಕ : ೦೩.೧೦.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೯೭ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.

**ನಿರ್ಣಯ:** ದಿನಾಂಕ ೦೩.೧೦.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೯೭ನೇ ಸಭೆಯ ನಡೆವಳಿಗಳನ್ನು ಸ್ಥಿರೀಕರಿಸಿ ಸಭೆ ಅನುಮೋದನೆ ನೀಡಿತು.

ದಿನಾಂಕ : ೦೩.೧೦.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೯೭ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.

**ನಿರ್ಣಯ:** ದಿನಾಂಕ ೦೩.೧೦.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೯೭ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸಭೆ ಅನುಮೋದನೆ ನೀಡಿತು.

**೯೮.೦೧ : ಡಾ. ವಿಠಲರಾವ್ ಟಿ. ಗಾಯಕ್ವಾಡ್, ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ ಅವರು ಸೆಬಾಟಿಕಲ್ ರಜೆ ಕೋರಿಕೆ ಕುರಿತು.**

**ನಿರ್ಣಯ** : ಡಾ. ವಿಠಲರಾವ್ ಟಿ. ಗಾಯಕ್ವಾಡ್, ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ ಇವರು ಒಂದು ವರ್ಷ ಕಾಲ ಸೆಬಾಟಿಕಲ್ ರಜೆ ಕೋರಿ ಮನವಿ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ 'ಪ್ರೊ. ಎ.ಎನ್. ಮೂರ್ತಿರಾವ್ ಅವರ ಭಾಷಾಂತರ ಕೃತಿಗಳ ಅಧ್ಯಯನ' ಎಂಬ ಯೋಜನೆಯನ್ನು ಪೂರೈಸಿಕೊಡಲು ಪ್ರಸ್ತಾವವನ್ನು ಸಲ್ಲಿಸಿದ್ದಾರೆ. ಸದರಿಯವರ ಕೋರಿಕೆಯನ್ನು ಪರಿಗಣಿಸಿ ನಿಯಮಾನುಸಾರ ಒಂದು ವರ್ಷಗಳ ಕಾಲ ಸೆಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಹಾಗೂ ಸದರಿ ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರೈಸಿಕೊಡಲು ಸಭೆ ಅನುಮೋದನೆ ನೀಡಿತು.

**೯೮.೦೨ : ಡಾ. ಗಂಗಾಧರ ದೈವಜ್ಞ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಅವರು ಸೆಬಾಟಿಕಲ್ ರಜೆ ಕೋರಿಕೆ ಕುರಿತು.**

**ನಿರ್ಣಯ** : ಡಾ. ಗಂಗಾಧರ ದೈವಜ್ಞ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರು ಒಂದು ವರ್ಷ ಕಾಲ ಸೆಬಾಟಿಕಲ್ ರಜೆ ಕೋರಿ ಮನವಿ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ 'ಬೆಳಗಾವಿ ಜಿಲ್ಲೆಯ ಸಣ್ಣಾಟಗಳ ಚಾರಿತ್ರಿಕ ಅಧ್ಯಯನ' ಎಂಬ ಯೋಜನೆಯನ್ನು ಪೂರೈಸಿಕೊಡಲು ಪ್ರಸ್ತಾವವನ್ನು ಸಲ್ಲಿಸಿದ್ದಾರೆ. ಸದರಿಯವರ ಕೋರಿಕೆಯನ್ನು ಪರಿಗಣಿ ನಿಯಮಾನುಸಾರ ಒಂದು ವರ್ಷಗಳ ಕಾಲ ಸೆಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಹಾಗೂ ಸದರಿ ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರೈಸಿಕೊಡಲು ಸಭೆ ಅನುಮೋದನೆ ನೀಡಿತು.

**೧೯೮.೦೩ : ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರದ ಜೈನ ಶಾಸನಗಳ ಸಂಪುಟಗಳಿಗೆ ಸಂಬಂಧಿಸಿದ ಸಂಭಾವನೆಗಳನ್ನು ನಿಗದಿಪಡಿಸುವ ಬಗ್ಗೆ.**

ನಿರ್ಣಯ : ಉಪಸಮಿತಿಯು ಕೈಗೊಂಡ ಶಿಫಾರಸ್ಸಿನನ್ವಯ ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರದ ಜೈನ ಶಾಸನಗಳ ಸಂಪುಟಗಳಿಗೆ ಸಂಬಂಧಿಸಿದ ಸಂಭಾವನೆ ನೀಡುವ ಕುರಿತು ಕಾರ್ಯಕಾರಿ ಸಮಿತಿಯು ಅನುಮೋದನೆ ನೀಡಿತು.

**೧೯೮.೦೪ : ದಿ. ಗಾದ್ರೆಪ್ಪ, ಸ್ಕ್ಯಾವೆಂಜರ್ ಇವರ ಅಕಾಲಿಕ ಮರಣದ ಹಿನ್ನೆಲೆಯಲ್ಲಿ ಅವರ ಕುಟುಂಬದ ಸದಸ್ಯರೊಬ್ಬರು (ಮಗಳು ಬಿ. ಲಕ್ಷ್ಮಿ) ಅನುಕಂಪದ ಆಧಾರದ ಮೇಲೆ ರಿಕ್ತ ಹುದ್ದೆಗೆ ನೇಮಕ ಮಾಡುವಂತೆ ಮನವಿಯನ್ನು ಸಲ್ಲಿಸಿದ್ದಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ನೇಮಕಾತಿ ಮಾಡಿಕೊಳ್ಳುವುದಕ್ಕೆ ಕಾರ್ಯಕಾರಿ ಸಮಿತಿಯ ನಿರ್ದೇಶನ ಕೋರಿದೆ.**

ನಿರ್ಣಯ : ದಿ. ಗಾದ್ರೆಪ್ಪ, ಸ್ಕ್ಯಾವೆಂಜರ್ ಇವರ ಅಕಾಲಿಕ ಮರಣದ ಹಿನ್ನೆಲೆಯಲ್ಲಿ ಅವರ ಕುಟುಂಬದ ಸದಸ್ಯರೊಬ್ಬರಾದ ಅವರ ಮಗಳು ಬಿ. ಲಕ್ಷ್ಮಿ ಅನುಕಂಪದ ಆಧಾರದ ಮೇಲೆ ರಿಕ್ತ ಹುದ್ದೆಗೆ ನೇಮಕ ಮಾಡುವಂತೆ ಸಲ್ಲಿಸಿದ ಮನವಿಯನ್ನು ಕಾರ್ಯಕಾರಿ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಕಾರ್ಯಕಾರಿ ಸಮಿತಿಯು ಅನುಮೋದನೆ ನೀಡಿತು.

**೧೯೮.೦೫ : ದಿನಾಂಕ ೨೨.೧೨.೨೦೧೮ರಂದು ನಡೆದ ಪ.ಜಾ. ಮತ್ತು ಪ.ಪಂ. ವಿಶೇಷ ಘಟಕದ ಸಲಹಾ ಸಮಿತಿ ಸಭೆಯ ನಡಾವಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

ನಿರ್ಣಯ : ದಿನಾಂಕ ೨೨.೧೨.೨೦೧೮ರಂದು ನಡೆದ ಪ.ಜಾ. ಮತ್ತು ಪ.ಪಂ. ವಿಶೇಷ ಘಟಕದ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಈ ಕೆಳಕಂಡ ತಿದ್ದುಪಡಿಯೊಂದಿಗೆ ಅನುಮೋದನೆ ನೀಡಲಾಯಿತು.

ವಿಷಯ : ೩. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಸತಿನಿಲಯಗಳ ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನದಿಂದ ಬರುವ ಬಡ್ಡಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಲು ಅವಕಾಶಗಳಿರುವುದಿಲ್ಲ ಎಂಬುದನ್ನು ಪರಿಗಣಿಸಿ ವಿದ್ಯಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ವಿಶ್ವವಿದ್ಯಾಲಯವು ತನ್ನ ಅಭಿವೃದ್ಧಿ ಅನುದಾನದಲ್ಲಿ ಭರಿಸುವುದು ಸೂಕ್ತವೆಂದು ಸಭೆ ಅನುಮೋದನೆ ನೀಡಿತು.

**೧೯೮.೦೬ : ವಿವಿಧ ಅಧ್ಯಯನಗಳ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಸಿಎಎಸ್ ಪ್ರಕ್ರಿಯೆ ಜಾರಿಯಲ್ಲಿದೆ. ಇವರ ಸಿಎಎಸ್ ಮುಂಬಡ್ತಿಗೆ ಅರ್ಹಗೊಳಿಸಲು ಅನುವಾಗುವಂತೆ ನಿಕಾಯವಾರು/ ವಿಷಯವಾರು ತಜ್ಞರನ್ನೊಳಗೊಂಡ ನೇಮಕಾತಿ ಮಂಡಳಿ ಸದಸ್ಯರ ನಾಮನಿರ್ದೇಶನಗೊಳಿಸಿ, ಸಮಿತಿ ರಚಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

ನಿರ್ಣಯ : ಸಿಎಎಸ್ ಪ್ರಕ್ರಿಯೆ ಸಂಬಂಧಿಸಿದಂತೆ ಅಧ್ಯಯನ ವಿಭಾಗಗಳ ಸಹಾಯಕ ಪ್ರಾಧ್ಯಾಪಕರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲನಾ ಸಮಿತಿಯು ಪರಿಶೀಲಿಸಿ ವರದಿ ಸಲ್ಲಿಸಿದ ನಂತರ ವಿಷಯವಾರು ತಜ್ಞರನ್ನು ಸೂಚಿಸಲಾಗುವುದು ಎಂದು ಸಭೆ ತೀರ್ಮಾನಿಸಿತು.

**೧೯೮.೦೭ : ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಮಾನ್ಯತಾ ಕೇಂದ್ರಕ್ಕೆ ಮರುಮಾನ್ಯತೆ ನೀಡಿರುವುದಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮತಿ ಕೋರಿದೆ.**

ನಿರ್ಣಯ : ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಮಾನ್ಯತಾ ಕೇಂದ್ರಕ್ಕೆ ಮರುಮಾನ್ಯತೆ ನೀಡಿರುವುದಕ್ಕೆ ಕಾರ್ಯಕಾರಿ ಸಮಿತಿ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.

**೧೯೮.೦೮ : ೨೦೧೮-೧೯ನೇ ಸಾಲಿನ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿ/ಬಾಹ್ಯ ಮಾರ್ಗದರ್ಶಕರ ಪಟ್ಟಿಗೆ ಮಾನ್ಯ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.**

ನಿರ್ಣಯ : ೨೦೧೮-೧೯ನೇ ಸಾಲಿನ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿ/ಬಾಹ್ಯ ಮಾರ್ಗದರ್ಶಕರ ಪಟ್ಟಿಯನ್ನು ತುರ್ತಾಗಿ ಪರಿಶೀಲಿಸಿ ಅಂತಿಮ ಪಟ್ಟಿ ಸಿದ್ಧಪಡಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲಾಯಿತು.

| | |
|---|---|
| ೧. | : ಅಧ್ಯಕ್ಷರು |
| ೨. ಡೀನ್, ಭಾಷಾ ನಿಕಾಯ | : ಸದಸ್ಯರು |
| ೩. ಡೀನ್, ಸಮಾಜ ವಿಜ್ಞಾನಗಳ ನಿಕಾಯ | : ಸದಸ್ಯರು |
| ೪. ಡೀನ್, ಲಲಿತಕಲೆಗಳ ನಿಕಾಯ | : ಸದಸ್ಯರು |
| ೫. ಡೀನ್, ವಿಜ್ಞಾನಗಳ ನಿಕಾಯ | : ಸದಸ್ಯರು |
| ೬. ಉಪಕುಲಸಚಿವರು (ಆಡಳಿತ) | : ಸಂಚಾಲಕರು |

**೧೯೮.೦೯ : ಶ್ರೀ ಯಂಕಪ್ಪ, ಜವಾನ, ಇವರ ಸ್ವಯಂ ನಿವೃತ್ತಿ ಹಿನ್ನೆಲೆಯಲ್ಲಿ ಮರು ನೇಮಕಾತಿಗೆ ಸಲ್ಲಿಸಿರುವ ಮನವಿ ಕುರಿತು.**

ನಿರ್ಣಯ : ಶ್ರೀ ಯಂಕಪ್ಪ ಇವರ ಮರು ನೇಮಕಾತಿಗೆ ಸಂಬಂಧಿಸಿದಂತೆ ಡಾ. ಸ.ಚಿ. ರಮೇಶ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ

ಮತ್ತು ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ ಹಾಗೂ ಉಪಕುಲಸಚಿವರು (ಆಡಳಿತ) ಇವರು ಇರುವ ವಿಚಾರಣಾ ಸಮಿತಿಯನ್ನು ರಚಿಸಲಾಯಿತು. ಸದರಿ ಸಮಿತಿಯು ವಿಚಾರಣೆ ನಡೆಸಿ ಮಾನವೀಯ ದೃಷ್ಟಿಯಿಂದ ಮರು ನೇಮಕಾತಿಗೆ ಪರಿಗಣಿಸಬಹುದೆಂದು ಸಭೆ ತೀರ್ಮಾನಿಸಿತು.

**೧೯೮.೧೦ : ಕನ್ನಡ ವಿಶ್ವವಿದ್ಯಾಲಯದಲ್ಲಿ ಕಳೆದ ೨೦ ವರ್ಷಗಳಿಂದ ಒಂದೂ ಮುಂಬಡ್ತಿ ಪಡೆಯದಿರುವ ಹಾಗೂ ನಿರಂತರವಾಗಿ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ**

**೧. ಶ್ರೀ ಎಂ. ವಿಜಯ್ ಕುಮಾರ** **೨. ಶ್ರೀ ಈರೇಶಪ್ಪ**
**೩. ಶ್ರೀಮತಿ ಬಿ. ಗಂಗಮ್ಮ ಗೌಳಿ** **೪. ಶ್ರೀ ಬಿ. ವೆಂಕಟೇಶ**
**೫. ಶ್ರೀ ಡಿ. ಪರಮೇಶ್ವರಪ್ಪ**

**ಇವರುಗಳ ಮನವಿಯನ್ನು ಪರಿಗಣಿಸಿ ಮಾನ್ಯ ಕುಲಪತಿಗಳು ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ ಮುಂಬಡ್ತಿ ಆದೇಶಗಳನ್ನು ಹೊರಡಿಸಲಾಗಿದೆ. ಇದಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮೋದನೆಯನ್ನು ಕೋರಿದೆ.**

ನಿರ್ಣಯ : ಈ ಮೇಲ್ಕಂಡ ಸಿಬ್ಬಂದಿಗಳನ್ನು ಒಳಗೊಂಡ ಹಾಗೆ ಇನ್ನುಳಿದ ಸಿಬ್ಬಂದಿಗಳ ಮನವಿಗಳನ್ನು ಪರಿಶೀಲಿಸಿ ೧೦ ವರ್ಷ, ೧೫ ವರ್ಷ ಮತ್ತು ೨೦ ವರ್ಷ ಸೇವೆ ಸಲ್ಲಿಸಿರುವ ಸಿಬ್ಬಂದಿಗಳ ವಿವರಗಳನ್ನು ಸಿದ್ಧಪಡಿಸಿ ಯಾವ ಹುದ್ದೆಗೆ ಮೇಲ್ದರ್ಜೆಗೇರಿಸಬೇಕೆಂಬ ವಿವರಗಳನ್ನು ನೀಡಲು ನಾಲ್ಕೂ ನಿಕಾಯದ ಡೀನರು ಸದಸ್ಯರಾಗಿರುವ ಸಮಿತಿಯನ್ನು ರಚಿಸಲಾಯಿತು. ಸದರಿ ಸಮಿತಿಯು ತುರ್ತಾಗಿ ಸಭೆ ಸೇರಿ ವರದಿಯನ್ನು ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ಮೇಲ್ದರ್ಜೆಗೆ ಅರ್ಹವಾಗಿರುವ ಸಿಬ್ಬಂದಿಗಳು ಅವರು ಮೊದಲು ನಿರ್ವಹಿಸುತ್ತಿರುವ ಹುದ್ದೆಯ ಕೆಲಸಗಳನ್ನು ನಿರ್ವಹಿಸಬೇಕೆಂಬ ಷರತ್ತನ್ನು ಆದೇಶದಲ್ಲಿ ದಾಖಲಿಸಬೇಕೆಂದು ಕೂಡ ನಿರ್ಣಯಿಸಲಾಯಿತು.

**೧೯೮.೧೧ : ಕನ್ನಡ ವಿಶ್ವವಿದ್ಯಾಲಯದ ವಿವಿಧ ವರ್ಗದ ಬೋಧಕೇತರ ಸಿಬ್ಬಂದಿಗಳು ಮುಂಬಡ್ತಿ ಕೋರಿ ಸಲ್ಲಿಸಿರುವ ಮನವಿ ಕುರಿತು.**

ನಿರ್ಣಯ : ವಿಷಯ ೧೯೮.೧೦ರಲ್ಲಿನ ಸಿಬ್ಬಂದಿಗಳನ್ನು ಒಳಗೊಂಡ ಹಾಗೆ ಇನ್ನುಳಿದ ಸಿಬ್ಬಂದಿಗಳ ಮನವಿಗಳನ್ನು ಪರಿಶೀಲಿಸಿ ೧೦ ವರ್ಷ, ೧೫ ವರ್ಷ ಮತ್ತು ೨೦ ವರ್ಷ ಸೇವೆ ಸಲ್ಲಿಸಿರುವ ಸಿಬ್ಬಂದಿಗಳ ವಿವರಗಳನ್ನು ಸಿದ್ಧಪಡಿಸಿ ಯಾವ ಹುದ್ದೆಗೆ ಮೇಲ್ದರ್ಜೆಗೇರಿಸಬೇಕೆಂಬ ವಿವರಗಳನ್ನು ನೀಡಲು ನಾಲ್ಕೂ ನಿಕಾಯದ ಡೀನರು ಸದಸ್ಯರಾಗಿರುವ ಸಮಿತಿಯನ್ನು ರಚಿಸಲಾಯಿತು. ಸದರಿ ಸಮಿತಿಯು ತುರ್ತಾಗಿ ಸಭೆ ಸೇರಿ ವರದಿಯನ್ನು ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ಮೇಲ್ದರ್ಜೆಗೆ ಅರ್ಹವಾಗಿರುವ ಸಿಬ್ಬಂದಿಗಳು ಅವರು ಮೊದಲು ನಿರ್ವಹಿಸುತ್ತಿರುವ ಹುದ್ದೆಯ ಕೆಲಸಗಳನ್ನು ನಿರ್ವಹಿಸಬೇಕೆಂಬ ಷರತ್ತನ್ನು ಆದೇಶದಲ್ಲಿ ದಾಖಲಿಸಬೇಕೆಂದು ಕೂಡ ನಿರ್ಣಯಿಸಲಾಯಿತು.

**೧೯೮.೧೨ : ವಸ್ತುಸಂಗ್ರಹಾಲಯದ ಉನ್ನತ ಸಲಹಾ ಸಮಿತಿ ಸಭೆಯ ನಡೆವಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

ನಿರ್ಣಯ : ದಿನಾಂಕ ೧೨.೧೨.೨೦೧೮ರಂದು ನಡೆದ ಕನ್ನಡ ವಿಶ್ವವಿದ್ಯಾಲಯ ವಸ್ತುಸಂಗ್ರಹಾಲಯದ ಉನ್ನತ ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಕಾರ್ಯಕಾರಿ ಸಮಿತಿಯು ಅನುಮೋದಿಸಿತು.

**೧೯೮.೧೩ : ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕುಲಸಚಿವರು ದಿನಾಂಕ ೧೬.೧೨.೨೦೧೮ರ ಪತ್ರದ ಮೂಲಕ ತಮ್ಮ ವಿಶ್ವವಿದ್ಯಾಲಯದ ಗ್ರಂಥ ಭಂಡಾರಕ್ಕೆ ಉಚಿತವಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಕಟಣೆಗಳನ್ನು ನೀಡಲು ಮನವಿ ಸಲ್ಲಿಸಿರುವ ಬಗ್ಗೆ.**

ನಿರ್ಣಯ : ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಗ್ರಂಥ ಭಂಡಾರಕ್ಕೆ ಕನ್ನಡ ವಿಶ್ವವಿದ್ಯಾಲಯದ ಪ್ರಕಟಣೆಗಳನ್ನು ಉಚಿತವಾಗಿ ನೀಡಬೇಕೆಂದು ಸದರಿ ವಿಶ್ವವಿದ್ಯಾಲಯದ ಕುಲಸಚಿವರು ಬರೆದಿರುವ ಮನವಿಯನ್ನು ಪರಿಗಣಿಸಿ ಕನ್ನಡ ವಿಶ್ವವಿದ್ಯಾಲಯದ ಎಲ್ಲ ಪ್ರಕಟಣೆಗಳ ಒಂದೊಂದು ಪ್ರತಿಯನ್ನು ಗೌರವ ಪ್ರತಿಯಾಗಿ ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ನೀಡಲು ಸಭೆಯು ಅನುಮೋದನೆ ನೀಡಿತು.

**೧೯೮.೧೪ : ಶ್ರೀಮತಿ ಚಿತ್ರಕಲಾ ಎಚ್. ದಿಗ್ಸಂಗಿಕರ್, ಇವರ ಪ್ರತಿನಿಯೋಜನಾ ಅವಧಿ ಮುಂದುವರಿಕೆಗೆ ಮನವಿ ಸಲ್ಲಿಸಿರುವ ಬಗ್ಗೆ.**

ನಿರ್ಣಯ : ಶ್ರೀಮತಿ ಚಿತ್ರಕಲಾ ಎಚ್. ದಿಗ್ಸಂಗಿಕರ್, ಕಿರಿಯ ಸಹಾಯಕರು ಇವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರತಿನಿಯೋಜನೆ ಮೇಲೆ ತೆರಳಿದ್ದು, ಸದರಿಯವರು ತಮ್ಮ ಪ್ರತಿನಿಯೋಜನಾ ಅವಧಿಯನ್ನು ವಿಸ್ತರಿಸುವಂತೆ ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಮುಂದಿನ ಮೂರು ವರ್ಷಗಳ ಅವಧಿಯವರೆಗೆ ಪ್ರತಿನಿಯೋಜನೆಯನ್ನು ಮುಂದುವರೆಸಲು ಅನುಮೋದನೆ ನೀಡಲಾಯಿತು.

**೧೯೮.೧೫ : ಕನ್ನಡ ವಿಶ್ವವಿದ್ಯಾಲಯದ ೨೦೧೭-೧೮ನೇ ಸಾಲಿನ ವಾರ್ಷಿಕ ಗುಣಮಟ್ಟ ಭರವಸೆ ವರದಿ(AQAR)ಯನ್ನು ನ್ಯಾಕ್‌ಗೆ ಸಲ್ಲಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ.**

ನಿರ್ಣಯ : ಐಕ್ಯೂಎಸಿಯು ಸಿದ್ಧಪಡಿಸಿದ ಕನ್ನಡ ವಿಶ್ವವಿದ್ಯಾಲಯದ ೨೦೧೭-೧೮ನೇ ಸಾಲಿನ ವಾರ್ಷಿಕ ಗುಣಮಟ್ಟ ಭರವಸೆ ವರದಿ(AQAR)ಯನ್ನು ನ್ಯಾಕ್‌ಗೆ ಸಲ್ಲಿಸಿರುವ ಕ್ರಮವನ್ನು ಸಭೆಯು ಅನುಮೋದನೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**೧೯೮.೧೬ : ದಿನಾಂಕ ೦೩.೧೧.೨೦೧೯ರಂದು ನಡೆದ ಖರೀದಿ ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ಕೋರಿದೆ.**

ನಿರ್ಣಯ : ಮಂಡಿಸಲಾದ ಖರೀದಿ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡಿತು.

**೧೯೮.೧೭ : ದಿನಾಂಕ ೦೩.೧೧.೨೦೧೯ರಂದು ನಡೆದ ಕಾಮಗಾರಿ/ಕಟ್ಟಡ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ಕೋರಿದೆ.**

ನಿರ್ಣಯ : ಮಂಡಿಸಲಾದ ಕಾಮಗಾರಿ/ಕಟ್ಟಡ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡಿತು. ವಾಲ್ಮೀಕಿ ಅಧ್ಯಯನ ಪೀಠ ಭವನದ ಮುಂದಿನ ರಸ್ತೆ, ಕಾಮಗಾರಿ, ಬೆಳ್ಳಿಭವನ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ತಾಂತ್ರಿಕ ವಿಭಾಗವು ಕ್ರಮವಹಿಸಬೇಕೆಂದು ತೀರ್ಮಾನಿಸಲಾಯಿತು.

**೧೯೮.೧೮ : ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯಕ್ಕೆ ಸಂಶೋಧನಾ ಸಹಾಯಕರನ್ನು ನೇಮಿಸುವ ಕುರಿತು.**

ನಿರ್ಣಯ : ಇತ್ತೀಚೆಗೆ ಪುನರಾರಂಭವಾದ ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದ ನಿರ್ವಹಣೆಗೆ ಒಬ್ಬ ಸಂಶೋಧನಾ ಸಹಾಯಕರ ಅಗತ್ಯತೆಯನ್ನು ಮನಗಂಡ ಕಾರ್ಯಕಾರಿ ಸಮಿತಿಯು ಅರ್ಜಿ ಸಲ್ಲಿಸಿದ ಶ್ರೀ ಲೋಕಣ್ಣ ಭಜಂತ್ರಿ, ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಇವರನ್ನು ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಸಂಶೋಧನಾ ಸಹಾಯಕರಾಗಿ ನೇಮಿಸಲು ಅನುಮೋದನೆ ನೀಡಲಾಯಿತು. ಹಾಗೂ ಸಂಶೋಧನಾ ಸಹಾಯಕರಿಗೆ ನಿಗದಿಪಡಿಸಿದ ವೇತನವನ್ನು ನೀಡಲು ತೀರ್ಮಾನಿಸಲಾಯಿತು.

**೧೯೮.೧೯ : ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಜನಪದ ಪ್ರದರ್ಶಕ ಕಲೆಗಳ ಡಿಪ್ಲೊಮಾ ಮತ್ತು ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸುವ ಕುರಿತು.**

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗವು ಜನಪದ ಪ್ರದರ್ಶಕ ಕಲೆಗಳ ಡಿಪ್ಲೊಮಾ ಮತ್ತು ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಲು ಸಲ್ಲಿಸಿದ ಮನವಿಯನ್ನು ಪರಿಗಣಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಸದರಿ ಕೋರ್ಸ್‌ಗಳನ್ನು ಆರಂಭಿಸಬೇಕೆಂದು ನಿರ್ಣಯಿಸಲಾಯಿತು. ಈ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಪೂರಕ ಪಠ್ಯಕ್ರಮಗಳನ್ನು ಸಿದ್ಧಪಡಿಸಿಕೊಳ್ಳಲು ತೀರ್ಮಾನಿಸಲಾಯಿತು.

**೧೯೮.೨೦ : ಖಾಯಂ ನೋಂದಣಿ ಪೂರ್ವ ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯದ ದೃಢೀಕೃತ ಸಂಪನ್ಮೂಲ ವ್ಯಕ್ತಿಗಳಿಗೆ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಓದಲು ಸೌಲಭ್ಯ ಕಲ್ಪಿಸುವ ಕುರಿತು.**

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಶಿಫಾರಸ್ಸು ಮಾಡಿದ ಖಾಯಂ ನೋಂದಣಿ ಪೂರ್ವ ವಿದ್ಯಾರ್ಥಿಗಳಿಗೆ ಹಾಗೂ ದೃಢೀಕೃತ ಸಂಪನ್ಮೂಲ ವ್ಯಕ್ತಿಗಳಿಗೆ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ಬಳಸಿಕೊಳ್ಳಲು ಹಾಗೂ ಎರವಲು ಚೀಟಿ ಪಡೆಯಲು ಅನುಮೋದನೆ ನೀಡಲಾಯಿತು. ಅಧ್ಯಯನ ವಿಭಾಗಗಳು ವಿದ್ಯಾರ್ಥಿಗಳ ಮತ್ತು ಸಂಪನ್ಮೂಲ ವ್ಯಕ್ತಿಗಳ ಪಟ್ಟಿಗಳನ್ನು ಮುಂಚಿತವಾಗಿ ಗ್ರಂಥಾಲಯಕ್ಕೆ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

**೧೯೮.೨೧ : ನಾಟಕ ವಿಭಾಗಕ್ಕೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ನಿರ್ವಹಿಸಲು ಸಹಾಯಕರೊಬ್ಬರನ್ನು ನೇಮಿಸುವ ಕುರಿತು.**

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ನಾಟಕ ವಿಭಾಗಕ್ಕೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ನಿರ್ವಹಿಸಲು ಒಬ್ಬ ಸಹಾಯಕರ ಅವಶ್ಯಕತೆ ಇದೆಯೆಂದು ನಾಟಕ ವಿಭಾಗದ ಮುಖ್ಯಸ್ಥರು ಕೋರಿಕೆ ಸಲ್ಲಿಸಿದ್ದಾರೆ. ನಾಟಕ ವಿಭಾಗದ ಮುಖ್ಯಸ್ಥರು ಮಂಡಿಸಿದ ಶ್ರೀ ಎಸ್. ಶಬ್ಬೀರ್ ಭಾಷ, ಕಂಚಗಾರ ಪೇಟೆ, ತಿಲಕ್ ಶಾಲೆ ಹತ್ತಿರ, ಹೊಸಪೇಟೆ ಇವರ ಅರ್ಜಿಯನ್ನು ಪರಿಗಣಿಸಿ ನಾಟಕ ವಿಭಾಗಕ್ಕೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ನಿರ್ವಹಿಸಲು ಸಹಾಯಕರಾಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು.

**೧೯೮.೨೨ : ದೇವದುರ್ಗ ವಿಸ್ತರಣಾ ಅಧ್ಯಯನ ಕೇಂದ್ರಕ್ಕೆ ಗ್ರಂಥಾಲಯ ಸಹಾಯಕರನ್ನು ತಾತ್ಕಾಲಿಕವಾಗಿ ನೇಮಿಸುವ ಕುರಿತು.**

ನಿರ್ಣಯ : ದೇವದುರ್ಗ ವಿಸ್ತರಣಾ ಅಧ್ಯಯನ ಕೇಂದ್ರದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಸೇವೆಯನ್ನು ನೀಡಲು ಒಬ್ಬ ಸಹಾಯಕರ ಅವಶ್ಯಕತೆ ಇರುವುದನ್ನು ಮನಗಂಡು ಸದರಿ ಕೇಂದ್ರದಲ್ಲಿ ಒಬ್ಬ ಅರ್ಹ ಅಭ್ಯರ್ಥಿಯನ್ನು ಗ್ರಂಥಾಲಯ ಸಹಾಯರನ್ನಾಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು. ಗ್ರಂಥಾಲಯ ಸಹಾಯಕರಾಗಿ ಕಾರ್ಯನಿರ್ವಹಿಸುವ ಅಭ್ಯರ್ಥಿಯು ವಿಸ್ತರಣಾ ಕೇಂದ್ರದ ಕಚೇರಿ ಕೆಲಸಗಳನ್ನು ಕೂಡ ನಿರ್ವಹಿಸುವುದು ಅಗತ್ಯವೆಂದು ಆದೇಶದಲ್ಲಿ ನಮೂದಿಸಲು ನಿರ್ಣಯಿಸಲಾಯಿತು.

**೧೯೮.೨೩ : ಕನ್ನಡ ವಿಶ್ವವಿದ್ಯಾಲಯದ ೨೭ನೇ ನುಡಿಹಬ್ಬ/ಘಟಿಕೋತ್ಸವ ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.**

ನಿರ್ಣಯ : ಕಾರ್ಯಕಾರಿ ಸಮಿತಿಯ ೧೯೭ನೇ ಸಭೆಯ ನಡೆವಳಿಯ ೧೯೭.೦೮ ಮತ್ತು ೧೯೭.೦೯ ನಿರ್ಣಯಗಳಿಗೆ ಸಂಬಂಧಿಸಿದಂತೆ

ಕನ್ನಡ ವಿಶ್ವವಿದ್ಯಾಲಯದ ೨೭ನೇ ನುಡಿಹಬ್ಬ/ಘಟಿಕೋತ್ಸವ ದಿನಾಂಕ, ನಾಡೋಜ ಆಯ್ಕೆ ಸಮಿತಿ ಸದಸ್ಯರ ನಾಮನಿರ್ದೇಶನ ಮತ್ತು ಮುಖ್ಯ ಅತಿಥಿಗಳ ನಾಮನಿರ್ದೇಶನ ಕೋರಿ ಘನತೆವೆತ್ತ ರಾಜ್ಯಪಾಲರಿಗೆ ಅಕ್ಟೋಬರ್ ೦೩, ೨೦೧೮ರಂದು ಮಾನ್ಯ ಕುಲಪತಿಗಳು ಪತ್ರ ಬರೆದಿದ್ದರು. ಘನತೆವೆತ್ತ ರಾಜ್ಯಪಾಲರ ಸಚಿವಾಲಯದಿಂದ (ಸಂಖ್ಯೆ:ಜಿಎಸ್ ೪ ಕೆಎನ್‌ಎಂ ೨೦೧೮. ದಿನಾಂಕ: ೦೭.೦೧.೨೦೧೯) ಕಾರ್ಯದರ್ಶಿಗಳು ಮಾನ್ಯ ಕುಲಪತಿಗಳಿಗೆ ಪತ್ರ ಬರೆದು ಈ ಕೆಳಕಂಡಂತೆ ಸೂಚಿಸಿದ್ದಾರೆ.

೧. ಶ್ರೀ ಎ.ಎಸ್. ಕಿರಣ್ ಕುಮಾರ್ ಅಥವಾ ಡಾ. ಸುಧಾ ನಾರಾಯಣ ಮೂರ್ತಿ ಇವರಲ್ಲಿ ಒಬ್ಬರನ್ನು ನುಡಿಹಬ್ಬಕ್ಕೆ ಘಟಿಕೋತ್ಸವ ಭಾಷಣ ಮಾಡಲು ಮುಖ್ಯ ಅತಿಥಿಯಾಗಿ ಆಹ್ವಾನಿಸಲು ನಿರ್ದೇಶನ ನೀಡಿದ್ದಾರೆ.
೨. ಜನವರಿ ೨೦೧೯ರ ಕೊನೆಯ ವಾರದಲ್ಲಿ ಘಟಿಕೋತ್ಸವವನ್ನು ನಡೆಸಲು ಸೂಚಿಸಿದ್ದಾರೆ.
೩. ಡಾ. ಮೀನಾ ಚಂದಾವರ್ಕರ ಮತ್ತು ಪ್ರೊ. ವೀರಣ್ಣ ರಾಜೂರ ಅವರನ್ನು ನಾಡೋಜ ಗೌರವ ಪದವಿ ಆಯ್ಕೆ ಸಮಿತಿಯ ಸದಸ್ಯರನ್ನಾಗಿ ಸೇರಿಸಲು ಸೂಚಿಸಿದ್ದಾರೆ.
ನಾಡೋಜ ಗೌರವ ಪದವಿ ಆಯ್ಕೆ ಸಮಿತಿಗೆ ಕಾರ್ಯಕಾರಿ ಸಮಿತಿಯಿಂದ ಹಿರಿಯ ಸಾಹಿತಿಗಳಾದ ಡಾ. ಸಿದ್ಧಲಿಂಗಯ್ಯ ಅವರ ಹೆಸರನ್ನು ನಾಮನಿರ್ದೇಶನ ಮಾಡಲಾಯಿತು.

ನಾಡೋಜ ಗೌರವ ಪದವಿ ಆಯ್ಕೆ ಸಮಿತಿ ಸಭೆಯನ್ನು ಕೂಡಲೇ ಕರೆದು ಸಮಾವೇಶಗೊಳಿಸಲು ಕ್ರಮವಹಿಸಬೇಕೆಂದು ನಿರ್ಣಯಿಸಲಾಯಿತು. ಮುಖ್ಯ ಅತಿಥಿಯಾಗಿ ಆಹ್ವಾನಿಸಲು ಪತ್ರಗಳನ್ನು ಕೂಡಲೇ ಸಿದ್ಧಪಡಿಸಿ ರವಾನಿಸಲು ಕ್ರಮವಹಿಸಬೇಕೆಂದು ನಿರ್ಣಯಿಸಲಾಯಿತು. ನುಡಿಹಬ್ಬಕ್ಕೆ ಸಂಬಂಧಿಸಿದಂತೆ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲು ಉಪಸಮಿತಿಗಳನ್ನು ರಚಿಸಿ ಅಧಿಸೂಚನೆ ಹೊರಡಿಸಲು ಸೂಚಿಸಲಾಯಿತು.

**೧೯೮.೨೪ : ಕನ್ನಡ ವಿಶ್ವವಿದ್ಯಾಲಯಕ್ಕೆ ಗ್ರಂಥಾಲಯಕ್ಕೆ ಸಹಾಯಕ ಗ್ರಂಥಪಾಲಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಕುರಿತು.**

ನಿರ್ಣಯ : ಈ ಹಿಂದೆ ಅಕ್ಷರ ಗ್ರಂಥಾಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಪ್ರಭಾವತಿ ದಳವಾಯಿ ಇವರು ತಮ್ಮ ಹೆರಿಗೆಯ ನಿಮಿತ್ತ ಮೂರು ತಿಂಗಳು ರಜೆಯ ಮೇಲೆ ತೆರಳಿದ್ದರು. ಈ ಅವರು ರಜೆಯಿಂದ ಹಿಂತಿರುಗಿ ಬಂದಿದ್ದಾರೆ. ಗ್ರಂಥಾಲಯದಲ್ಲಿ ಮತ್ತೆ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕೆಂದು ಕೋರಿ ಮನವಿ ಸಲ್ಲಿಸಿದ್ದಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ಗ್ರಂಥಾಲಯಕ್ಕೆ ತಾತ್ಕಾಲಿಕವಾಗಿ ಸಹಾಯಕರ ಗ್ರಂಥಪಾಕರನ್ನಾಗಿ ಕಾರ್ಯನಿರ್ವಹಿಸಲು ಶ್ರೀಮತಿ ಪ್ರಭಾವತಿ ದಳವಾಯಿ ಇವರನ್ನು ನೇಮಿಸಲು ಅನುಮೋದನೆ ನೀಡಲಾಯಿತು.

**೧೯೮.೨೫ : ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹೊಸ ವಸತಿನಿಲಯಗಳಿಗೆ ಹೆಚ್ಚುವರಿ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸುವ ಕುರಿತು.**

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗಾಗಿ ನಿರ್ಮಿಸಲಾದ ಹೊಸ ವಸತಿನಿಲಯಗಳಿಗೆ ಭದ್ರತೆ ನೀಡುವ ಹಿತದೃಷ್ಟಿಯಿಂದ ಏಜೆಂಟ್‌ಗಳ ಮೂಲಕ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಲು ಸಭೆಯು ಅನುಮೋದಿಸಿತು.

**೧೯೮.೨೬ : ಶ್ರೀ ಶೈಲ ಅತಿಥಿಗೃಹದಲ್ಲಿ ಅಡುಗೆ ಮಾಡುವವರನ್ನು ನಿಯೋಜಿಸುವ ಕುರಿತು.**

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿರುವ ಶ್ರೀ ಶೈಲ ಅತಿಥಿಗೃಹದಲ್ಲಿ ವಾಸ್ತವ್ಯಮಾಡುವ ಅತಿಥಿಗಳಿಗೆ ಮತ್ತು ಗಣ್ಯರಿಗೆ ಉಪಾಹಾರ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸುವುದು ಅಗತ್ಯವಾಗಿದೆ. ಈ ವ್ಯವಸ್ಥೆಗಾಗಿ ಅಡುಗೆ ಮಾಡುವ ಒಂದು ಕುಟುಂಬವನ್ನೇ ಏಜೆಂಟ್‌ಗಳ ಮೂಲಕ ನಿಯೋಜಿಸಲು ಸಭೆಯು ಅನುಮೋದಿಸಿತು.

**೧೯೮.೨೭ : ಚಿತ್ರಕಲಾ ವಿದ್ಯಾಲಯಗಳ ೨೦೧೮-೧೯ನೇ ಸಾಲಿನ ವಾರ್ಷಿಕ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಕುರಿತು.**

ನಿರ್ಣಯ : ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ರಾಜ್ಯದ ಸುಮಾರು ೬೦ ಚಿತ್ರಕಲಾ ವಿದ್ಯಾಲಯಗಳ ಪರೀಕ್ಷೆಗಳನ್ನು ನಡೆಸಿ ಫಲಿತಾಂಶವನ್ನು ಪ್ರಕಟಿಸಿ ಪ್ರಮಾಣಪತ್ರಗಳನ್ನು ನೀಡುವ ಹೊಣೆಯನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಿತು. ಹಾಗೆಯೇ ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕ ಅನುದಾನವನ್ನು ನೀಡುತ್ತಾ ಬಂದಿದೆ. ಆದರೆ ಕಳೆದ ಮೂರು ವರ್ಷಗಳಿಂದ ಪ್ರತ್ಯೇಕ ಅನುದಾನವನ್ನು ನೀಡಿರುವುದಿಲ್ಲ. ಕಳೆದ ಮೂರು ವರ್ಷಗಳಿಂದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಮಾನವೀಯ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ತನ್ನ ಅಭಿವೃದ್ಧಿ ಅನುದಾನದಲ್ಲಿ ಪರೀಕ್ಷೆಗಳನ್ನು ನಡೆಸಿದೆ. ಇದರಿಂದ ವಿಶ್ವವಿದ್ಯಾಲಯಕ್ಕೆ ಈ ಅನುದಾನದ ಹೊರೆ ತುಂಬಾ ಆಗಿದೆ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯು ೨೦೧೮-೧೯ನೇ ಸಾಲಿಗಾಗಿ ಪ್ರತ್ಯೇಕ ಅನುದಾನವನ್ನು ನೀಡಿದರೆ ಮಾತ್ರ ಚಿತ್ರಕಲಾ ವಿದ್ಯಾಲಯಗಳ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲಾಗುವುದು ಎಂದು ತಿಳಿಸಿ ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆಯುವುದರ ಮೂಲಕ ಅನುದಾನ ಕೋರಬೇಕೆಂದು ಸಭೆಯು ನಿರ್ಣಯಿಸಿತು.

**೯೮.೨೮ : ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ ಕಟ್ಟಡದ ಬಾಕಿ ಅನುದಾನ ಕುರಿತು.**

**ನಿರ್ಣಯ** : ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಅನುದಾನದಲ್ಲಿ ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ ಕಟ್ಟಡವನ್ನು ನಿರ್ಮಿಸಲಾಗಿದೆ. ಬಿಡುಗಡೆಯಾದ ಅನುದಾನಕ್ಕೆ ಬಳಕೆ ಪ್ರಮಾಣಪತ್ರವನ್ನು ಸಿದ್ಧಪಡಿಸಿ ಸದರಿ ನಿಗಮಕ್ಕೆ ಕಳುಹಿಸುವುದ ಮೂಲಕ ಉಳಿದ ಬಾಕಿ ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಬೇಕೆಂದು ಕೋರಿ ಪತ್ರ ಬರೆಯಲು ಸಭೆ ನಿರ್ಣಯಿಸಲಾಯಿತು. ಈ ಕಟ್ಟಡದ ಉದ್ಘಾಟನೆಗಾಗಿ ಸಮಾಜ ಕಲ್ಯಾಣ ಇಲಾಖೆಯ ಸಚಿವರನ್ನು ಹಾಗೂ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮವು ಸೂಚಿಸುವ ಗಣ್ಯರಿಂದ ನೆರವೇರಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಯಿತು. ಈ ಕುರಿತು ಪತ್ರ ಬರೆಯಲು ಸಭೆ ನಿರ್ಣಯಿಸಿತು.

**೯೮.೨೯ : ಮಾರ್ಚ್ ೨೦೧೮ರಲ್ಲಿ ಹೊಸದಾಗಿ ನೇಮಕಗೊಂಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಬಾಕಿ ವೇತನ ನೀಡುವ ಕುರಿತು.**

**ನಿರ್ಣಯ** : ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾರ್ಚ್ ೨೦೧೮ರಲ್ಲಿ ನಿಯಮಾನುಸಾರ ೩೭(ಜೆ) ಅಡಿಯಲ್ಲಿ ಖಾಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಹೊಸದಾಗಿ ನೇಮಕ ಮಾಡಿ ದಿನಾಂಕ ೨೭.೦೩.೨೦೧೮ರಂದು ಆದೇಶ ನೀಡಲಾಗಿತ್ತು. ಆ ಆದೇಶಗಳನ್ವಯ ಸದರಿ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಕೂಡ ಮಾಡಿಕೊಂಡಿದ್ದರು. ಆದರೆ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರು ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸದರಿ ಆದೇಶಗಳನ್ನು ಹಿಂಪಡೆಯಲು ಸೂಚಿಸಿದರು. ಅವರ ನಿರ್ದೇಶನದನ್ವಯ ದಿನಾಂಕ ೦೩.೦೪.೨೦೧೮ರಂದು ನೇಮಕಾತಿ ಆದೇಶಗಳನ್ನು ಹಿಂಪಡೆಯಲಾಗಿತ್ತು. ಹಿಂಪಡೆದ ಆದೇಶಗಳಿಗೆ ಸದರಿ ಸಿಬ್ಬಂದಿಗಳು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ (WP No. 102629-102642/2018(S-RES) ತಂದರು. ನ್ಯಾಯಾಲಯದ ತಡೆಯಾಜ್ಞೆ ಅನ್ವಯ ದಿನಾಂಕ ೧೨.೦೪.೨೦೧೮ರಂದು ಮತ್ತೆ ನೇಮಕಾತಿ ಆದೇಶಗಳನ್ನು ಸದರಿ ಸಿಬ್ಬಂದಿಗಳಿಗೆ ನೀಡಲಾಯಿತು. ಈ ಹಿನ್ನೆಲೆಯಲ್ಲಿ ದಿನಾಂಕ ೨೭.೦೩.೨೦೧೮ರಿಂದ ೧೨.೦೪.೨೦೧೮ರ ವರೆಗಿನ ಅವಧಿಯನ್ನು ಸಲ್ಲಿಸಿದ ಸೇವೆಯೆಂದು ಪರಿಗಣಿಸಿ ನ್ಯಾಯಾಲಯ ನೀಡುವ ತೀರ್ಪಿಗೆ ಒಳಪಡುವ ಷರತ್ತಿನ ಮೇರೆಗೆ ವೇತನ ಪಾವತಿ ಮಾಡಬೇಕೆಂದು ಮನವಿ ಸಲ್ಲಿಸಿದ್ದಾರೆ. ನ್ಯಾಯಾಲಯ ನೀಡುವ ತೀರ್ಪಿಗೆ ಒಳಪಡುವ ಷರತ್ತಿನ ಮೇರೆಗೆ ಸದರಿ ೧೪ ಜನ ಸಿಬ್ಬಂದಿಗಳ ಮನವಿಯನ್ನು ಪರಿಗಣಿಸಿ ಸದರಿ ಅವಧಿಯ ವೇತನವನ್ನು ಪಾವತಿ ಮಾಡಲು ಸಭೆಯು ಅನುಮೋದನೆ ನೀಡಿತು.

**೯೮.೩೦ : ಮಾರ್ಚ್ ೨೦೧೮ರಲ್ಲಿ ಹೊಸದಾಗಿ ನೇಮಕಗೊಂಡ ಬೋಧಕ ಸಿಬ್ಬಂದಿಗಳ ಮನವಿ ಕುರಿತು.**

**ನಿರ್ಣಯ** : ಮಾರ್ಚ್ ೨೦೧೮ರಲ್ಲಿ ಹೊಸದಾಗಿ ನೇಮಕಗೊಂಡ ೯ ಜನ ಬೋಧಕ ಸಿಬ್ಬಂದಿಗಳು ಬೇಸಿಗೆ ರಜೆಯನ್ನು ಗಳಿಕೆ ರಜೆಯಾಗಿ ಪರಿವರ್ತಿಸುವಂತೆ ಕೋರಿ ಮನವಿ ಸಲ್ಲಿಸಿದ್ದಾರೆ. ಆದರೆ ಸದರಿ ೯ ಜನ ಸಿಬ್ಬಂದಿಗಳು ಬೇಸಿಗೆ ರಜೆಯ ಅವಧಿಯಲ್ಲಿ ವಿಭಾಗದ ಮುಖ್ಯಸ್ಥರಾಗಿ ಅಥವಾ ವಿಭಾಗದ ಕೆಲಸಗಳನ್ನು ನಿರ್ವಹಿಸಲು ಹಾಜರಾದಾಗ ಮಾತ್ರ ಅಂಥವರಿಗೆ ನಿಯಮಾನುಸಾರ ಗಳಿಕೆ ರಜೆಯನ್ನು ಲೆಕ್ಕ ಹಾಕಿ ಸದರಿಯವರ ಸೇವಾ ಪುಸ್ತಕದಲ್ಲಿ ಜಮಾ ಮಾಡಿ ದಾಖಲಿಸಲು ಸಭೆಯು ಅನುಮೋದನೆ ನೀಡಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು